# ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

ರಾಜ್ಯಕೇಂದ್ರಕಾರ್ಯಾಲಯ, #39, ಶಾಂತಿಗೃಹ, ಅರಮನೆರಸ್ತೆ, ಬೆಂಗಳೂರು – 560 001

ದೂ: (ಸ್ಕೌಟ್ ವಿಭಾಗ)+91-80-2226 0017; (ಗೈಡ್ ವಿಭಾಗ) +91-80-2226 7470; ಫ್ಯಾಕ್ಸ್: +91-80-2226 1047

ಮಿಂಚಂಚೆ: info@bsgkarnataka.org ಅಂತರ್ಜಾಲ: www.bsgkarnataka.in


ಸಂಖ್ಯೆ:ಎಸ್‌ಹೆಚ್‌ಕ್ಯೂ/ 1295 /2026-27 ದಿನಾಂಕ:15.10.2026

ಎಲ್ಲಾ ಜಿಲ್ಲಾ ಕಾರ್ಯದರ್ಶಿಗಳು
ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್,
ಜಿಲ್ಲಾ ಸಂಸ್ಥೆ,
ಕರ್ನಾಟಕ.

**ಮಾನ್ಯರೆ,**

ವಿಷಯ:- ರಾಜ್ಯ ಮಟ್ಟದ ಕಬ್ಬಡ್ಡಿ ಪಂದ್ಯಾವಳಿಗೆ ಸ್ಕೌಟ್ಸ್ ಮತ್ತು ಗೈಡ್ಸ್‌ಗಳನ್ನು ನಿಯೋಜಿಸುವ ಬಗ್ಗೆ.

******

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ರಾಜ್ಯ ಸಂಸ್ಥೆ ಹಾಗೂ ಚಿತ್ರದುರ್ಗ ಜಿಲ್ಲಾ ಸಂಸ್ಥೆಯ ಸಹಯೋಗದಲ್ಲಿ ರಾಜ್ಯ ಮಟ್ಟದ ಸ್ಕೌಟ್ಸ್ ಮತ್ತು ಗೈಡ್ಸ್‌ಗಳ ಕಬ್ಬಡ್ಡಿ ಪಂದ್ಯಾವಳಿಯನ್ನು ದಿನಾಂಕ:24.11.2026 ರಿಂದ 26.11.2026 ರವರೆಗೆ ಶ್ರೀ ಮುರುಘರಾಜೇಂದ್ರ ಬೃಹನ್ಮಠ, ಎಂ.ಕೆ ಹಟ್ಟಿ, ಪಿ.ಬಿ ರಸ್ತೆ, ಚಿತ್ರದುರ್ಗ ಜಿಲ್ಲೆ ಇಲ್ಲಿ ಆಯೋಜಿಸಲಾಗಿದೆ. ಶಿಬಿರದ ವಿವರಗಳು ಈ ಕೆಳಕಂಡಂತಿವೆ.

| | |
|---|---|
| ಶಿಬಿರ | ರಾಜ್ಯ ಮಟ್ಟದ ಸ್ಕೌಟ್ಸ್ ಮತ್ತು ಗೈಡ್ಸ್‌ಗಳ ಕಬ್ಬಡ್ಡಿ ಪಂದ್ಯಾವಳಿ |
| ದಿನಾಂಕ | 24 ರಿಂದ 26 ನವೆಂಬರ್ 2026 ರವರೆಗೆ |
| ಸ್ಥಳ | ಶ್ರೀ ಮುರುಘರಾಜೇಂದ್ರ ಬೃಹನ್ಮಠ, ಎಂ.ಕೆ ಹಟ್ಟಿ, ಪಿ.ಬಿ ರಸ್ತೆ, ಚಿತ್ರದುರ್ಗ ಜಿಲ್ಲೆ |
| ನೊಂದಾವಣಿ ದಿನಾಂಕ | 24.11.2026 ರಂದು ಬೆಳಗ್ಗೆ 8.30 ಗಂಟೆಗೆ ಶಿಬಿರ ಸ್ಥಳದಲ್ಲಿ ಹಾಜರಾಗುವುದು. |
| ನೊಂದಣಿ & ಶಿಬಿರ ಶುಲ್ಕ | ಶಿಬಿರ ಶುಲ್ಕ ತಲಾ ರೂ.100/- |
| ಬಿಡುಗಡೆ ದಿನಾಂಕ | 26.11.2026 ರಂದು ಸಂಜೆ 5 ಗಂಟೆಗೆ ಬಿಡುಗಡೆಗೊಳಿಸಲಾಗುವುದು. |
| ಯಾರು ಭಾಗವಹಿಸುವುದು. | ಪ್ರತಿ ಜಿಲ್ಲೆಯಿಂದ 7+5 ಸ್ಕೌಟ್ಸ್, 7+5 ಗೈಡ್ಸ್ ವಿದ್ಯಾರ್ಥಿಗಳು ಹಾಗೂ ಸ್ಕೌಟ್ ತಂಡದೊಂದಿಗೆ ಸ್ಕೌಟ್ ಮಾಸ್ಟರ್ ಹಾಗೂ ಗೈಡ್ ತಂಡದೊಂದಿಗೆ ಗೈಡ್ ಕ್ಯಾಪ್ಟನ್‌ರವರು ಭಾಗವಹಿಸಲು ಅವಕಾಶವಿರುತ್ತದೆ. |
| ನಿಬಂಧನೆಗಳು | • ಸ್ಪರ್ಧೆಯಲ್ಲಿ ಭಾಗವಹಿಸುವ ಸ್ಕೌಟ್ಸ್/ಗೈಡ್ಸ್‌ಗಳು ಕಡ್ಡಾಯವಾಗಿ 16 ವರ್ಷದೊಳಗೆ ಇರಬೇಕು.<br>• ಶಾಲಾ ಅರ್ಹತಾ ಪ್ರಮಾಣಪತ್ರವನ್ನು ಕಡ್ಡಾಯವಾಗಿ ತರುವುದು (ಮುಖ್ಯಶಿಕ್ಷಕರಿಂದ ದೃಢೀಕರಿಸುವುದು ಕಡ್ಡಾಯ).<br>• ಕ್ರೀಡಾಪಟುವಿನ ಭಾವಚಿತ್ರಕ್ಕೆ ಶಾಲಾ ಮುಖ್ಯೋಪಾಧ್ಯಯರ ಸಹಿ ಮತ್ತು ದೃಢೀಕರಣವಿರಬೇಕು.<br>• ಇದರೊಂದಿಗೆ ಲಗತ್ತಿಸಿರುವ ಎಸ್.ಜಿ.ಎಫ್.ಐ ಆಫ್‌ಲೈನ್ ನಮೂನೆಯನ್ನು ಭರ್ತಿ ಮಾಡಿ ಕಡ್ಡಾಯವಾಗಿ ತರುವುದು.<br>• ತಮ್ಮ ಜಿಲ್ಲೆಯ ಧ್ವಜವನ್ನು ಕಡ್ಡಾಯವಾಗಿ ತರುವುದು. |

| | |
|---|---|
| ಪ್ರಯಾಣ ವೆಚ್ಚ | ತಮ್ಮ ಸ್ಥಳದಿಂದ ಶಿಬಿರ ಸ್ಥಳಕ್ಕೆ ಹೋಗಿ ಬರುವ ಪ್ರಯಾಣ ವೆಚ್ಚ ಮತ್ತು ಶಿಬಿರ ಶುಲ್ಕವನ್ನು ಆಯಾಯ ಶಾಲೆಯ ಸ್ಕೌಟ್-ಗೈಡ್ ನಿಧಿಯಿಂದ ಭರಿಸುವುದು. |
| ಶಿಬಿರ ಸ್ಥಳಕ್ಕೆ ತಲುಪುವ ವಿಧಾನ | ಚಿತ್ರದುರ್ಗ ಬಸ್ ನಿಲ್ದಾಣದಿಂದ ಶಿಬಿರ ಸ್ಥಳಕ್ಕೆ 2.5 ಕಿ.ಮೀ ದೂರವಿದ್ದು, ಬಸ್ಸುಗಳು ಹಾಗೂ ಆಟೋಗಳು ಲಭ್ಯವಿರುತ್ತವೆ. |
| ತರಬೇಕಾದ ಸಾಮಾಗ್ರಿಗಳು | ಎಸ್.ಜಿ.ಎಫ್.ಐ ನಮೂನೆ, ತಮ್ಮ ಜಿಲ್ಲೆಯ ಧ್ವಜ, ಎ.ಪಿ.ಆರ್.ಒ ಭಾಗ 2 ಮತ್ತು 3ರ ನಿಯಮಾನುಸಾರ ಸಂಪೂರ್ಣ ಹಾಗೂ ಸರಿಯಾದ ಸಮವಸ್ತ್ರ, ಟೀ-ಶರ್ಟ್, ಶಿಬಿರಾಗ್ನಿ ಕಾರ್ಯಕ್ರಮಕ್ಕೆ ಅಗತ್ಯವಾದ ವೇಷಭೂಷಣಗಳು, ಪುಸ್ತಕ, ಪೆನ್, ಸ್ಲೀಪಿಂಗ್ ಬ್ಯಾಗ್, ಸ್ವೆಟರ್, ಛತ್ರಿ, ರೈನ್ ಕೋಟ್, ವೈಯಕ್ತಿಕ ಬಳಕೆಯ ಸ್ವಚ್ಛತಾ ಸಾಮಾಗ್ರಿಗಳು, ಪ್ರಥಮ ಚಿಕಿತ್ಸೆ ಕಿಟ್, ಇತ್ಯಾದಿ |
| ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ | ಶ್ರೀ ದೇವರಾಜ್ ಪ್ರಸಾದ್, ಜಿಲ್ಲಾ ಆಯುಕ್ತರು(ಸ್ಕೌ)-8073038213<br>ಶ್ರೀ ರೆಹಮ್ಮತ್ ಉಲ್ಲಾ, ಜಂಟಿ ಕಾರ್ಯದರ್ಶಿ-9845840143 |
| ಆನ್‌ಲೈನ್‌ನಲ್ಲಿ ನೊಂದಾವಣಿ | https://zfrmz.in/NmJvJ8HEUICXrNwRCTVm |

ಆದ್ದರಿಂದ, ಮೇಲ್ಕಂಡ ಶಿಬಿರಕ್ಕೆ ತಮ್ಮ ಜಿಲ್ಲೆಯಿಂದ ಅರ್ಹ ಸ್ಕೌಟ್ಸ್ & ಗೈಡ್ಸ್‌ಗಳನ್ನು ಆಯ್ಕೆ ಮಾಡಿ, ಇಂದಿನಿಂದಲೇ ಕಬ್ಬಡ್ಡಿ ಅಭ್ಯಾಸವನ್ನು ಪ್ರಾರಂಭಿಸಿ ಸಂಪೂರ್ಣ ಸಿದ್ಧತೆಯೊಂದಿಗೆ ಸ್ಪರ್ಧೆಯಲ್ಲಿ ಭಾಗವಹಿಸುವಂತೆ ಪ್ರೋತ್ಸಾಹಿಸುವಂತೆ ಹಾಗೂ ಸ್ಪರ್ಧೆಗೆ ನಿಯೋಜಿಸಿ ಯಶಸ್ವಿಗೊಳಿಸಬೇಕಾಗಿ ಕೋರಲಾಗಿದೆ. ತಮ್ಮ ಜಿಲ್ಲೆಯಿಂದ ಭಾಗವಹಿಸುತ್ತಿರುವ ಸ್ಕೌಟ್ಸ್ & ಗೈಡ್ಸ್‌ಗಳ ಪಟ್ಟಿ ಮತ್ತು ಇತರೆ ವಿವರಗಳನ್ನು ದಿನಾಂಕ:10.11.2026ರ ಒಳಗಾಗಿ ಚಿತ್ರದುರ್ಗ ಜಿಲ್ಲಾ ಸಂಸ್ಥೆ ಹಾಗೂ ರಾಜ್ಯ ಸಂಸ್ಥೆಗೆ ಕಳುಹಿಸುವಂತೆ ವಿನಂತಿಸಿದೆ.

ಸ್ಕೌಟ್ಸ್ – ಗೈಡ್ಸ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

(ಕೆ. ಗಂಗಪ್ಪಗೌಡ)
ರಾಜ್ಯ ಕಾರ್ಯದರ್ಶಿ

ಪ್ರತಿಯನ್ನು :

1. ಜಿಲ್ಲಾ ಮುಖ್ಯ ಆಯುಕ್ತರು, ಭಾ.ಸ್ಕೌ&ಗೈ, ಕರ್ನಾಟಕ
2. ಎ.ಎಸ್.ಒ.ಸಿ/ಡಿಒ/ಡಿಒಟಿ/ಎಸ್‌ಜಿವಿ/ಎಸ್‌ಜಿವಿಗಳ ಸೂಕ್ತ ಕ್ರಮಕ್ಕಾಗಿ
3. ಕಛೇರಿ ಪ್ರತಿ